
# ವಾಸ್ ಡ್ರೆಸ್

## ಈವತ್ತಿನ ವೀಡಿಯೋದಲ್ಲಿ ನಾವು ವಾಸ್ ಡ್ರೆಸ್ಸನ್ನು ಹೇಗೆ ಹೊಲೆಯುವುದೆಂದು ಕಲಿಯುತ್ತೇವೆ














**ವಸ್ತುಗಳ ವಿವರ**

45 ಇಂಚು ಅಗಲದ 2 ಮೀಟರ್ ಬಟ್ಟೆ
ನೆಕ್ ಫೇಸಿಂಗಿಗೆ ಬೇಕಾದ ¼ ಮೀಟರ್ ಬಟ್ಟೆ
www.ushasew.com ನಿಂದ ಡೌನ್ಲೋಡ್ ಮಾಡಿಕೊಂಡಿರುವ ವಾಸ್ ಡ್ರೆಸ್ಸಿನ ಟೆಂಪ್ಲೇಟ್
ಚಾಲ್ಕ್
ಮೆಶರಿಂಗ್ ಟೇಪ್
ಕತ್ತರಿ
ಸ್ಕೇಲ್
ಬೀಡೆಡ್ ಪಿನ್
ಮ್ಯಾಚಿಂಗ್ ದಾರ
ಹ್ಯಾಂಡ್ ನೀಡಲ್

ಈ ವೀಡಿಯೋದಲ್ಲಿ ನಾವು ಟೆಂಪ್ಲೇಟ್ ಸಹಾಯದಿಂದ ಬಟ್ಟೆಯನ್ನು ಕತ್ತರಿಸುವುದು, ಮುಂಭಾಗ ಮತ್ತು ಹಿಂಭಾಗದ ಪೀಸ್ ಗಳನ್ನು ಭುಜದ ಭಾಗವನ್ನು ಹೊಲೆಯುವುದರೊಂದಿಗೆ ಸೇರಿಸುವುದು, ಕತ್ತಿನ ಮುಂಭಾಗವನ್ನು ಹೊಲೆಯುವುದು, ಸೈಡ್ ಸೀಮ್ಗಳನ್ನು ಹೊಲೆಯುವುದು ಮತ್ತು ತೋಳುಗಳನ್ನು ಮತ್ತು ಡ್ರೆಸ್ಸಿನ ಕೆಳಭಾಗವನ್ನು ಹೆಮ್ ಮಾಡುವುದು. ಈಗ ಪ್ರಾರಂಭಿಸೋಣ.

**ಹಂತ 1: ಟೆಂಪ್ಲೇಟನ್ನು ಮಾರ್ಕಿಂಗ್ ಮತ್ತು ಕತ್ತರಿಸಿವುದು**

ಬಟ್ಟೆಯನ್ನು ತೆರೆದು ಅದನ್ನು ಮೇಜಿನ ಮೇಲೆ ಇಡಬೇಕು. ಬಲಭಾಗ ಮೇಲೆ ಬರುವಂತೆ. ನಂತರ ವೀಡಿಯೋದಲ್ಲಿ ತೋರಿಸಿರುವಂತೆ ಎರಡೂ ಕಡೆಯಿಂದ ಒಳಭಾಗಕ್ಕೆ ಮಡಚಬೇಕು. www.ushasew.com ನಿಂದ ಡೌನ್ಲೋಡ್ ಮಾಡಿಕೊಂಡಿರುವ ವಾಸ್ ಡ್ರೆಸ್ಸಿನ ಮುಂಭಾಗದ ಟೆಂಪ್ಲೇಟನ್ನು ಬಟ್ಟೆಯ ಮೇಲೆ ಇಡಬೇಕು. ಅದರ ಮೇಲೆ ಮಡಚಿ ಎಂದು ಬರೆದಿರುವ ಭಾಗವನ್ನು ಸರಿಯಾಗಿ ಇಡಬೇಕು. ಬೀಡೆಡ್ ಪಿನ್ ಸಹಾಯದಿಂದ ಬಟ್ಟೆಗೆ ಟೆಂಪ್ಲೇಟಿನೊಂದಿಗೆ ಸರಿಯಾದ ಜಾಗದಲ್ಲಿ ಪಿನ್ ಮಾಡಿ. ನಂತರ ಟೆಂಪ್ಲೇಟಿನ ಹಿಂಭಾಗವನ್ನು ಡ್ರೆಸ್ಸಿನ  ಇನ್ನೊಂದು ಭಾಗದಲ್ಲಿ ಇಟ್ಟು ಪಿನ್ ಮಾಡಿ. ಮಡಚಿರುವ ಭಾಗವನ್ನು ಸರಿಯಾಗಿ ಗಮನಿಸಿ ಮಡಚಬೇಕು. ಬೀಡೆಡ್ ಪಿನ್ ಸಹಾಯದಿಂದ ಟೆಂಪ್ಲೇಟ್ ಮತ್ತು ಬಟ್ಟೆಯನ್ನು ಪಿನ್ ಮಾಡಿ.

ನಂತರ, ಚಾಲ್ಕನ್ನು ತೆಗೆದುಕೊಂಡು ಎರಡೂ ಟೆಂಪ್ಲೇಟನ್ನು ಬಟ್ಟೆಯ ಮೇಲೆ ಟ್ರೇಸ್ ಮಾಡಿ. ಮುಂಭಗದ ಟೆಂಪ್ಲೇಟಿನಿಂದ ಪ್ರಾರಂಭಿಸಿ ಪೂರ್ತಿಯಾಗಿ ಟ್ರೇಸ್ ಮಾಡಿ. ಮಾರ್ಕ್ ಮಾಡುವಾಗ ನೀವು ನಾಚನ್ನು ಟೆಂಪ್ಲೇಟಿನ ಮೇಲೆ ಗಮನಿಸಬಹುದು, ನಾಚನ್ನು ಬಟ್ಟೆಯ ಮೇಲೂ ಮಾರ್ಕ್ ಮಾಡಿ ಇದು ತೋಳಿನ ತೆರೆದಿರುವ ಭಾಗವಾಗಿರುತ್ತದೆ.



ಹಿಂಭಾಗದ ಟೆಂಪ್ಲೇಟಿನ ಕಡೆಗೆ ಹೋಗಿ ಅದನ್ನೂ ಟ್ರೇಸ್ ಮಾಡೋಣ. ಹುಷಾರಾಗಿ ಕರ್ವ್ಸ್ ಮತ್ತು ಎಡ್ಜಸನ್ನು ಟ್ರೇಸ್ ಮಾಡಿ. ತೋಳಿನ ತೆರೆದಿರುವ ಭಾಗದ ನಾಚನ್ನು ಮಾರ್ಕ್ ಮಾಡುವುದನ್ನು ಹಿಂಭಾಗದ ಟೆಂಪ್ಲೇಟಿನ ಮೇಲೂ ಮಾರ್ಕ್ ಮಾಡಿ.




ಟೆಂಪ್ಲೇಟಿನ ಪಿನ್ ಗಳನ್ನು ತೆಗೆದು ಪಕ್ಕಕಿಡಬೇಕು. ಕತ್ತರಿಯನ್ನು ತೆಗೆದುಕೊಂಡು ಟ್ರೇಸ್ ಮಾಡಿರುವ ಗೆರೆಯ ಮೇಲೆ ಕತ್ತರಿಸಿ. ನೀವು ಸರಿಯಾಗಿ ಹಾಗು ನಾಜೋಕಾಗಿ ಕತ್ತರಿತ್ತಿರುವಿರೇ ಖಾತ್ರಿಮಾಡಿಕೊಳ್ಳಿ ಇದು ಪ್ಯಾಟರ್ನನ್ನು ಹಾಳುಮಾಡಬಹುದು. ಬಟ್ಟೆಯನ್ನು ಪೂರ್ತಿಯಾಗಿ ಕತ್ತರಿಸಿ ಮಿಕ್ಕಿರುವ ಬಟ್ಟೆಯನ್ನು ತೆಗೆದಿಡಿ. ಹಾಗೆ ಪುನರಾವರ್ತಿಸಲು ಇದು ಮುಂಭಾಗ.



**ಹಂತ 2 : ಮುಂಭಾಗ ಮತ್ತು ಹಿಂಭಾಗದ ಪೀಸ್ ಗಳನ್ನು ಒಟ್ಟಿಗೆ ಸೇರಿಸುವುದು**





ಈಗ ಬಟ್ಟೆಯನ್ನು ತೆಗೆದು ಮುಂಭಾಗದ ಪೀಸನ್ನು ಹಿಂಭಾಗದ ಪೀಸಿನ ಮೇಲಿಡಬೇಕು. ವೀಡಿಯೋದಲ್ಲಿ ತೋರಿಸಿರುವಂತೆ ಬಲಭಾಗ ಬಲಭಾಗವನ್ನು ಕಾಣುವಂತೆ ಇಡಬೇಕು. ಈಗ ಮುಂಭಾಗದ ಟೆಂಪ್ಲೇಟನ್ನು ಮತ್ತೆ ಬಟ್ಟೆಯ ಮೇಲ್ಭಾಗದ ಮೇಲೆ ಇಟ್ಟು ಇಟ್ಟು ನಾಚಸನ್ನು ಮಾರ್ಕ್ ಮಾಡಿ. ಟೆಂಪ್ಲೇಟನ್ನು ಈಗ ಪಕ್ಕಕಿಡಿ. ಈಗ ಪಿನ್ ಮಾಡಿರುವ ಬಟ್ಟೆಯನ್ನು ನಿಮ್ಮ ಊಷಾ ಜನೋಮ್ ಡ್ರೀಮ್ ಮೇಕರ್ 120 ಸೀವಿಂಗ್ ಮಷೀನಿನ ಹತ್ತಿರ ತೆಗೆದುಕೊಂಡು ಹೋಗಿ. ಹೊಲೆಯಲು ಪ್ರರಂಭಿಸುವ ಮುನ್ನ ಮಷೀನ್ ನೇರ ಹೊಲಿಗೆ ಮತ್ತು ಹೊಲಿಗೆಯ ಉದ್ದವನ್ನು 2.5ಗೆ ಇದೆಯೇ ಎಂದು ಖಾತ್ರಿಮಾಡಿಕೊಳ್ಳಿ





ಪ್ರೆಸ್ಸರ್ ಫುಟ್ಟಿಗೆ ಭುಜಭಾಗದ ತುದಿಯನ್ನು ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ನಾವು ರಿವರ್ಸ್ ಹೊಲಿಗೆಯನ್ನು ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ಹಾಕಬೇಕು. ಇದು ಹೊಲಿಗೆಯನ್ನು ಭದ್ರಗೊಳಿಸುತ್ತದೆ. ಕತ್ತಿನ ಭಾಗ ತಲಪುವವರೆಗೂ ಹೊಲೆಯುತ್ತಾ ಹೋಗಿ ಹಾಗೆ ಪಿನ್ ಗಳನ್ನೂ ತೆಗೆಯುತ್ತಾ ಹೋಗಿ. ರಿವರ್ಸ್ ಹೊಲಿಗಯನ್ನು ಎರಡು ಬಾರಿ ಹಾಕಿ ದಾರವನ್ನು ಕತ್ತರಿಸಿ.  ಹಾಗೆಯೇ ಇನ್ನೊಂದು ತೋಳನ್ನೂ ಹೊಲೆಯಿರಿ. ರಿವರ್ಸ್ ಹೊಲಿಗೆಯನ್ನು ಮೊದಲು ಮತ್ತು ಕೊನೆಯಲ್ಲಿ ಹಾಕುವುದನ್ನು ಮರೆಯಾಬೇಡಿ. ಹುಷಾರಾಗಿ ಪಿನ್ ಗಳನ್ನು ತೋಳಿನ ಭಾಗ ಹೊಲೆಯುವಾಗ ತೆಗೆಯಿರಿ. ಇನ್ನೊಮ್ಮೆ ರಿವರ್ಸ್ ಹೊಲಿಗೆಯನ್ನು ಮಾಡಿ ದಾರವನ್ನು ಕತ್ತರಿಸಿ. ಮುಗಿಯಿತು.





ಈಗ ಬಟ್ಟೆಯ ಫ್ರೇಯಿಂಗ್ ಎಡ್ಜಸನ್ನು ತಡೆಯುವ ವಿಧಾನ. ನಾವು ನೇರ ಹೊಲಿಗಯ ಮೇಲೆ ಜಿಗಜಾಗ್ ಹೊಲಿಗೆಯನ್ನು ಹಾಕಬೇಕು. ಸುಮ್ಮನೆ ಜಿಗ್ ಜಾಗ್ ಬಟನನ್ನು ನಿಮ್ಮ ಮಷೀನಿನಲ್ಲಿ ಒತ್ತಿ ಹೊಲೆಯಲು ಪ್ರಾರಂಭಿಸೋಣ. ಇದು ಜಿಗ್ ಜಾಗ್ ಹೊಲಿಗೆಯಾಗಿರುವುದರಿಂದ ರಿವರ್ಸ್ ಹೊಲಿಗೆ ಇದಕ್ಕೆ ಬೇಡ. ಜಿಗ್ ಜಾಗ್ ಹೊಲಿಗೆಯನ್ನು ಎರಡೂ ತೋಳಿಗೆ ಹಾಕಬೇಕು. ಇದನ್ನು ಮುಗಿಸಿದ ಮೇಲೆ ಕತ್ತರಿಯನ್ನು ತೆಗೆದುಕೊಂಡು ಸರಿಯಾದ ಫಿನಿಷಿಂಗ್ ಪಡೆಯಲು ಹೆಚ್ಚಾದ ದಾರವನ್ನು ಕತ್ತರಿಸಿ. ಅಂತಿಮವಾದ ತೋಳಿನ ಹೊಲಿಗೆ ನೋಡಲು ಹೀಗೆ ಕಾಣಬೇಕು.


























**ಹಂತ 3 : ಕತ್ತಿನ ಫೇಸಿಂಗನ್ನು ತಯಾರಿಸಿ ಮತ್ತು ಅದನ್ನು ನೆಕ್ ಲೈನಿಗೆ ಸೇರಿಸುವುದು**

ಈಗ ಬಿಳಿ ಬಣ್ಣದ ಕಾಟನ್ ಬಟ್ಟೇಯನ್ನು ತೆಗೆದುಕೊಂಡು ವಿಡಿಯೋದಲ್ಲಿ ತೋರಿಸಿದ ಹಾಗೆ ಬಟ್ಟೆಯನ್ನು ¼ ಭಾಗಕ್ಕೆ ಮಡಚಬೇಕು. ಈಗ ಬಟ್ಟೆಯ ಮುಂಭಾಗದ ಟೆಂಪ್ಲೇಟನ್ನು ತೆಗೆದುಕೊಂಡು ಬಟ್ಟೆಯ ಮೇಲೆ ಇಡಬೇಕು. ಒಂದು ಗಮನಿಸಬೇಕಾದ ವಿಷಯವೆಂದರೆ ಟೆಂಪ್ಲೇಟನ್ನು ಮಡಚುವ ಭಾಗವನ್ನು ಸರಿಯಾಗಿ ಇಡಬೇಕು. ಈಗ ಒಂದು ಪೀಸ್ ಚಾಲ್ಕನ್ನು ತೆಗೆದುಕೊಂಡು ನೆಕ್ಲೈನ್ ಮತ್ತು ತೋಳಿನ ಸ್ವಲ್ಪ ಭಾಗವನ್ನು ಮಾರ್ಕ್ ಮಾಡಿ. ಮಾರ್ಕ್ ಮಾಡಿರುವ ಲೈನಿನಿಂದ ಒಂದು ವರೆ ಇಂಚು ಅಳತೆ ಮಾಡಿ ಪಾಯಿಂತನ್ನು ಮಾರ್ಕ್ ಮಾಡಿ. ಇದನ್ನೇ ಲೈನಿನ ಮೇಲೆ ಇನ್ನೊಂದು ಪಾಯಿಂಟನ್ನು ಮಾಡಿ. ಈಗ ಸ್ಕೇಲನ್ನು ತೆಗೆದುಕೊಂಡು ಈ ಪಾಯಿಂಟನ್ನು ನೇರ ಗೆರೆಯೊಂದಿಗೆ ಸೇರಿಸಿ. ಈ ಗೆರೆಯು ತೋಳಿನ ಮಾರ್ಕಿಂಗ್ ತಲಪುವವರೆಗೂ ಮಾರ್ಕ್ ಮಾಡಿ. ಮತ್ತು ಈ ಪಾಯಿಂಟ್ ಗಳನ್ನು ನೇರ ಗೆರೆಗಳೊಂದಿಗೆ ಮಾರ್ಕ್ ಮಾಡಿ. ಈಗ ನಿಮ್ಮ ಹತ್ತಿರ ಆಯತಾಕಾರದ ಪೀಸ್ ಇರುತ್ತದೆ. ಇದನ್ನು ಬಟ್ಟೆಯಿಂದ ಹೊರಕ್ಕೆ ಕತ್ತರಿಸಿ. ಇದು ಕತ್ತಿನ ಮುಂಭಾಗದ ಫಿಟ್ಟೆಡ್ ಫೇಸಿಂಗ್ ಸ್ಟ್ರಿಪ್ ಆಗಿರುತ್ತದೆ. ಇದನ್ನು ಪಕ್ಕಕಿಡಿ.

ಈಗ ಮಿಕ್ಕಿರುವ ಬಟ್ಟೆಯ ಸರದಿ. ವೀಡಿಯೋದಲ್ಲಿ ತೋರಿಸಿರುವಂತೆ ಬಟ್ಟೆಯ ಇನ್ನೊಂದು ಭಾಗವನ್ನು ಮಡಚಬೇಕು. ಹಿಂಬದಿಯ ಟೆಂಪ್ಲೇಟನ್ನು ಬಟ್ಟೆಯನ್ನು ಇಡಬೇಕು. ಮಡಚುವ ಭಾಗವನ್ನು ಸರಿಯಾಗಿ ನೋಡಿಕೊಂಡು ಮಡಚಬೇಕು. ಮುಂಭಾಗದ ಟೆಂಪ್ಲೇಟಿಗೆ ಮಾಡಿದಂತೆ ನೆಕ್ ಲೈನನ್ನು ಟ್ರೇಸ್ ಮಾಡಿ ಮತ್ತು ತೋಳಿನ ಸ್ವಲ್ಪ ಭಾಗವನ್ನೂ ಟ್ರೇಸ್ ಮಾಡಿ. ಟ್ರೇಸ್ ಮಾಡಿದ ಮೇಲೆ ಮೆಶರಿಂಗ್ ಟೇಪನ್ನು ತೆಗೆದುಕೊಂಡು ಒಂದು ವರೆ ಇಂಚು ಅಳತೆ ಮಾಡಿ ಮಾರ್ಕ್ ಮಾಡಿ. ಇದನ್ನು ನೆಕ್ಲೈನಿನ ಸುತ್ತಲೂ ಮಾಡಬೇಕು ಇದು ಫ್ರೀ ಹ್ಯಂಡ್ ಕರ್ವ್ ಮಾಡಲು ಸಹಾಯವಾಗುತ್ತದೆ. ಮಾದಿರುವ ಪಾಯಿಂಟ್ ಗಳನ್ನು ಸೇರಿಸಿ. ಇದನ್ನು ಮುಗಿಸಿದ ಮೇಲೆ ಫೇಸಿಂಗನ್ನು ಕಟ್ ಮಾಡಿ. ಕರ್ವ್ ಗಳಲ್ಲಿ ಹುಷಾರಾಗಿ ಕಟ್ ಮಾಡಿ.ನಿಮ್ಮ ಮುಂಭಾಗ ಮತ್ತು ಹಿಂಭಾಗದ ಫೇಸಿಂಗ್ ನೋಡಲು ಹೀಗೆ ಕಾಣಬೇಕು. ಫೇಸಿಂಗ್ ಗಳಾನ್ನು ತೆರೆಯಿರಿ.  ನಾವೀಗ ತೋಳನ್ನು ಸೇರಿಸಬೇಕು. ಹಿಂಭಾಗದ ಫೇಸಿಂಗನ್ನು  ವಿ ಆಕಾರದ ನೆಕ್ ಫೇಸಿಂಗ್ ಮೇಲೆ ಇಡಬೇಕು. ಬಲಭಾಗ ಬಲಭಾಗವನ್ನು ನೋಡುವಂತೆ ಇದೆಯೇ ಎಂದು ಪರಿಶೀಲಿಸಿ ವೀಡಿಯೋದಲ್ಲಿ ತೋರಿಸಿರುವಂತೆ ಪಿನ್ ಮಾಡಿ. ಪಿನ್ ಮಾಡಿರುವ ಫೇಸಿಂಗನ್ನು ಮಷೀನಿನ ಹತ್ತಿರ ತೆಗೆದುಕೊಂಡು ಹೋಗಿ. ಹೊಲೆಯುವ ಮುನ್ನ ಮಷೀನನ್ನು ನೇರ ಹೊಲಿಗೆಗೆ ಮತ್ತು ಹೊಲಿಗೆಯ ಉದ್ದ 2.6 ಗೆ ಇದೆಯೇ ನೋಡಿಕೊಳ್ಳಿ ಸ್ಟ್ರಿಪಿನ ಕೊನೆಯನ್ನು ಪ್ರೆಸ್ಸರ್ ಫುಟ್ಟಿಗೆ ಅಲೈನ್ ಮಾಡಿ ಪಿನ್ ಮಾಡಿರುವ ಭಗವನ್ನು ಹೊಲೆಯಿರಿ. ಫೇಸಿಂಗ್ ಸ್ಟ್ರಿಪಿನಂತಹ ಸಣ್ಣ ಭಾಗಕ್ಕೂ ರಿವರ್ಸ್ ಹೊಲಿಗೆ ಬಹಳ ಮುಖ್ಯ. ಎರಡೂ ಪಿನ್ ಮಾಡಿರುವ ಭಾಗದಲ್ಲೂ ಹೊಲೆಯಿರಿ. ಇದನ್ನು ಮುಗಿಸಿದ ಮೇಲೆ ನಿಮ್ಮ ಹೊಲಿಗೆ ನೋಡಲು ಹೀಗೆ ಕಾಣಬೇಕು.ಇನ್ನೊಮ್ಮೆ ನೆನೆಪಿಸಲು, ನಾವು ಮುಖ್ಯವಾದ ಬಟ್ಟೆಯ ತೋಳನ್ನು ಹೊಲೆದಿದ್ದೇವೆ. ಮುಂದೆ ನಮ್ಮ ಪಟ್ಟಿಯಲ್ಲಿರುವುದು ನೆಕ್ ಲೈನನ್ನು ಹೊಲೆದು ನೆಕ್ ಫೇಸಿಂಗನ್ನು ನೆಕ್ ಫಿನಿಷಿಂಗಿಗೆ ಮಾಡುವುದು. ನಾವು ಇಲ್ಲಿ ತೋಳುಗಳನ್ನು ಹೊಲೆದಿದ್ದೇವೆ. ಈಗ ಮುಖ್ಯವಾದ ಬಟ್ಟೆಯನ್ನು ತೆಗೆದುಕೊಂಡು ಬಟ್ಟೆಯ ನೆಕ್ ಲೈನನ್ನು ಫೇಸಿಂಗಿಗೆ ಮ್ಯಾಚ್ ಮಾಡಿ. ಬಲಭಾಗ ಬಲಭಾಗ ನೋಡುವಂತೆ ಇದೆಯೇ ನೋಡಿಕೊಳ್ಳಿ, ನಾವೀಗ ಪಿನ್ ಮಾಡಿರುವ ಭಾಗವನ್ನು ಹೊಲೆಯಬೇಕು.

ನೆಕ್ ಲೈನನ್ನು ಪ್ರೆಸ್ಸರ್ ಫುಟಿನೊಂದಿಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ನೆಕ್ಲೈನಿನ ಸುತ್ತಲೂ ಹೊಲೆಯುತ್ತಾ ಪಿನ್ ಗಳನ್ನು ತೆಗೆಯುತ್ತಾ ಹೋಗಿ. ತುದಿಯನ್ನು ತಲುಪಿದಾಗ ಪಿವಟ್ ಟೆಕ್ನಿಕನ್ನು ಬಳಸಿ ಸೂಜಿಯನ್ನು ಬಟ್ಟೆಯಲ್ಲಿ ಇರುವಂತೆಯೇ ಬಟ್ಟೆಯನ್ನು ತಿರುಗಿಸುತ್ತಾ ಹೊಲೆಯಿರಿ.




ಇದು ಅಚ್ಚುಕಟ್ಟಾದ ಮತ್ತು ಒಂದೇ ಹೊಲಿಗೆಯಾಗಿರುತ್ತದೆ. ಇದನ್ನು ಮುಗಿಸಿದ ಮೇಲೆ ದಾರವನ್ನ ಕತ್ತರಿಸಿ. ಹೊಲಿಗೆಗಳು ಹೀಗೆ ಕಾಣಬೇಕು.

ನೀವೀಗ ನೋಡುತ್ತಿರುವಂತೆ ನಾವು ನೆಕ್ ಲೈನನ್ನು ಹೊಲೆದಿದ್ದೇವೆ. ವಿ ಆಕಾರದ ಮೇಲೆ ನಾಚನ್ನು ಮಾಡಿ. ಹೊಲಿಗೆಯನ್ನು ಕತ್ತರಿಸದಂತೆ ಎಚ್ಚರವಹಿಸಿ. ನಾವು ಸ್ಟ್ರಿಪಿನ ವೃತ್ತಾಕಾರದ ಮೇಲೂ ನಾಚಸನ್ನು ಮಾಡಿದ್ದೇವೆ. ಇದು ಬಟ್ಟೆ ಹಾಕಿಕೊಂಡಾಗ ಸರಿಯಾಗಿ ಕೂರುತ್ತದೆ. ನಾಚಸನ್ನು ಹೊಲಿಗೆಯ ಸತ್ತಲೂ ಮತ್ತು ಹೊಲಿಗೆಯ ಗೆರೆಯಮೇಲೂ ಹಾಕಬೇಕು.

**ಹಂತ 4 ತೋಳನ್ನು ಹೆಮ್ಮಿಂಗ್ ಮಾಡುವುದು**








ನಾವೀಗ ತೋಳಿನ ಕೆಲಸವನ್ನು ಮಾಡೋಣ. ಬಟ್ಟೆಯನ್ನು ಪೂರ್ತಿಯಾಗಿ ತೆರೆಯಿರಿ ನಾವು ಸೈಡ್ನಲ್ಲಿ ಮಾಡಿರುವ ಮಾರ್ಕನ್ನು ನೋಡಿ. ಈಗಆದನ್ನು ತೋಳಿನ ಭಾಗದಿಂದ ಮಡಚಿ ಮಾರ್ಕ್ ಗಳು ಹೊಂದುತ್ತಿವೆಯೇ ಎಂದು ನೋಡಿಕೊಳ್ಳಿ, ಈಗ ಬಟ್ಟೆಯನ್ನು ಹಿಂಡಿ ಈ ಮಾರ್ಕಿಂಗ್ ಮೇಲೆ ನಾಚನ್ನು ಮಾಡಿ. ಇನ್ನೊಂದು ಕಡೆನೂ ಹೀಗೆ ಮಾಡಬೆಕು. ಮಾರ್ಕಿಂಗ್ ಮೇಲೆ ಹಿಂಡಿ ನಾಚನ್ನು ಮಾಡಬೇಕು.

ನಾವೇಗ ತೋಳನ್ನು ಹೆಮ್ ಮಾಡಬೇಕು. ಇದಕ್ಕೆ ನಾವು ಬಟ್ಟೆಯನ್ನು ಕಾಲು ಇಂಚು ಎರಡು ಬಾರಿ ಮಡಚಿ ಮುಂಭಾಗದ ನಾಚಿನಿಂದ ಹಿಂಭಾಗದ ನಾಚನವರೆಗೂ ಮಡಚಬೇಕು. ತುದಿಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ಹೊಲೆಯುವಾಗ ಮಡಚುತ್ತಾ ಹೋಗಿ. ತೋಳಿನ ಸುತ್ತಲೂ ಹೊಲೆಯುತ್ತಾ ನಾಚಿನ ಹತ್ತಿರ ಬರುವವರೆಗೂ ಹೊಲೆದು ಇನ್ನೊಂದು ತುದಿ ತಲುಪಿದಾಗ ನಿಲ್ಲಿಸಿ ದಾರವನ್ನು ಕತ್ತರಿಸಿ. ನೀವು ಮಡಚಿರುವುದು ಅಚ್ಚುಕಟ್ಟಾಗಿ ಮತ್ತು ನಿರಂತರವಾಗಿದೆಯೇ ಎಂದು ಖಚಿತಪಡಿಸಿಕೊಳ್ಳಿ, ಇದೇ ವಿಧಾನ ಇನ್ನೊಂದು ಕಡೆನೂ ಪುನರಾವರ್ತಿಸಬೇಕು. ಇದು ಮುಗಿಸಿದ ಮೇಲೆ ದಾರವನ್ನು ಕತ್ತರಿಸಿ. ನಿಮ್ಮ ಅಂತಿಮ ಹೊಲಿಗೆ ನೋಡಲು ಹೀಗೆ ಕಾಣಬೇಕು.

**ಹಂತ 5 : ಸೈಡ್ ಸೀಮನ್ನು ಮುಗಿಸುವುದು ಮತ್ತು ಡ್ರೆಸ್ಸಿನ ಬಾಟಮನ್ನು ಹೆಮ್ಮಿಂಗ್ ಮಾಡುವುದು**





ಬೀಡೆಡ್ ಪಿನ್ ಸಹಾಯದಿಂದ ಬಲಭಾಗ ಬಲಭಾಗವನ್ನು ನೋಡುವಂತೆ ಸೈಡ್ ಗಳಾನ್ನು ಜೋಡಿಸಿ, ಇದರಿಂದ ಹೊಲೆಯುವುದು ಸುಲಭವಾಗುತ್ತದೆ. ನಾವು ಪಿನ್ ಮಾಡಿರುವ ಜಾಗವನ್ನು ವೀಡಿಯೋದಲ್ಲಿ ತೋರಿಸಿರುವಂತೆ ಹೊಲೆಯಬೇಕು. ನಾವು ಡ್ರೆಸ್ಸಿನ ಬಾಟಮನ್ನು ಹೆಮ್ ಮಾಡುತ್ತೇವೆ. ಪಿನ್ ಮಾಡಿರುವ ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ಎರಡು ಬಾರಿ ರಿವರ್ಸ್ ಹೊಲಿಗೆ ಹಾಕಿ ನಂತರ ಮಾಮೂಲಿನಂತೆ ಮುಂದುವರೆಯಿರಿ. ಹೊಲೆಯುತ್ತಾ ಹೋಗುವಾಗ ಪಿನ್ ಗಳನ್ನು ತೆಗೆಯುತ್ತಾ ಹೋಗಿ. ತುದಿಯನ್ನು ತಲುಪಿದಾಗ ದಾರವನ್ನು ಕತ್ತರಿಸಿ. ನಿಮ್ಮ ಹೊಲಿಗೆಗಳು ನೋಡಲು ಹೀಗೆ ಕಾಣಬೇಕು. ನಂತರ ಇನ್ನೊಂದು ಕಡೆಗೆ ಇದೇ ವಿಧಾನವನ್ನು ಅನುಸರಿಸಿ. ನಿಧಾನವಾಗಿ ಮತ್ತು ತಟಸ್ಥವಾಗಿ ಕೆಳಗಿನವರೆಗೂ ಹೊಲೆಯಿರಿ. ಇದನ್ನು ನೀವು ಮುಗಿಸಿದ ಮೇಲೆ ನಿಮ್ಮ ಊಷಾ ಜನೋಮ್ ಡ್ರೀಮ್ ಮೇಕರ್ 120 ಯಲ್ಲಿ ಜಿಗ್ ಜಾಗ್ ಹೊಲಿಗೆಯನ್ನು ಒತ್ತಿ ಸೈಡ್ ಸೀಮ್ ಗಳನ್ನು ಜಿಗ್ ಜಾಗ್ ಮಾಡಬೇಕು. ಇದು ಪುನರಾವರ್ತನೆ ಅನಿಸಬಹುದು ಆದರೆ ನಂಬಿ ಇದು ನಿಮ್ಮ ಬಟ್ಟೆಗೆ ಅಚ್ಚುಕಟ್ಟಾದ ನೋಟವನ್ನು ಕೊಡುತ್ತದೆ. ಜಿಗ್ ಜಾಗನ್ನು ಎರಡೂ ಕಡೆನೂ ಮಾಡಬೇಕು.












ಈಗ ಡ್ರೆಸ್ಸಿನ ಬಾಟಮನ್ನು ಹೆಮ್ ಮಾಡುವ ಸಮಯ. ಡ್ರೆಸ್ಸಿನ ಬಾಟಮನ್ನು ತೋಳನ್ನು ಮಡಚಿದಂತೆ ಮೊದಲು ಕಾಲು ಇಂಚು ಆನಂತರ ಮುಕ್ಕಾಲು ಇಂಚನ್ನು ಮಡಚಬೇಕು. ಹೊಲಿಗೆಯ ಉದ್ದ2.6 ಇದೆಯೇ ನೋಡಿಕೊಂಡು ಮಡಚಿರುವ ಭಾಗದ ಮೇಲೆ ಹೊಲೆಯಲು ಪ್ರಾರಂಭಿಸಿ. ಪೂರ್ತಿಯಾಗಿ ಎಲ್ಲಾ ಕಡೆನೂ ಹೊಲೆಯಿರಿ. ಹೊಲೆಯುತ್ತಾ ಹೋಗುವಾಗ ಮಡಚುತ್ತಾ ಹೋಗಿ. ನೀವು ಮಡಚಿರುವುದು ಅಚ್ಚುಕಟ್ಟಾಗಿದೆಯೇ ಎಂದು ನೋಡಿಕೊಳ್ಳಿ ನೀವು ಇದನ್ನು ಮುಗಿಸಿದ ಮೇಲೆ ದಾರವನ್ನು ಕತ್ತರಿಸಿ ಬಟ್ಟೆಯನ್ನು ಒಳಗಿಂದ ಹೊರಕ್ಕೆ ತಿರುಗಿಸಿ.

**ಹಂತ 6 : ನೆಕ್ಲೈನನ್ನುಮುಗಿಸುವುದು**

ನಾವೀಗ ಕತ್ತಿನ ಭಾಗವನ್ನು ಮುಗಿಸೋಣ. ಫೇಸಿಂಗ್ಸ್ಟ್ರಿಪನ್ನು ಇನ್ನೊಂದು ಕದೆಗೆ ಮಡಚಿ ಅದನ್ನು ಕೈಯಲ್ಲಿ ಹೊಲೆಯಿರಿ. ಫಿನಿಷಿಂಗ್ ಕೊಡುವುದಕ್ಕಾಗಿ ಫೇಸಿಂಗ್ಸ್ಟ್ರಿಪನ್ನು ಹೊಲೆಯುವಾಗ ಬಟ್ಟೆಯನ್ನು ಕಾಲು ಇಂಚು ವೀಡಿಯೋದಲ್ಲಿ ತೋರಿಸಿರುವಂತೆ ಮಡಚಬೇಕು. ನಿಮ್ಮ ಕೈಕೆಲಸ ನೋಡಲು ಹೀಗೆ ಕಾಣಬೇಕು.

ನಿಮಗೆ ನೆನಪಿಸಲು, ನಾವು ಸೈಡ್ ಸೀಮ್ಸ್ ಗಳನ್ನು ಹೊಲೆದಿದ್ದೇವೆ. ತೋಳನ್ನು ಹೆಮ್ ಮಾಡಿದ್ದೇವೆ, ತೋಳುಗಳು ಮತ್ತು ನೆಕ್ ಲೈನನ್ನು ಸೇರಿಸಿದ್ದೇವೆ. ನೀವು ನಿಮ್ಮ ಡ್ರೆಸ್ಸನ್ನು ಇನ್ನೂ ಸುಂದರವಾಗಿ ಕಾಣಾಲು ನಿಮಗಿಷ್ಟವಾದ ಅಸ್ಸೆಸರಿಗಳೊಂದಿಗೆ ಹಾಕಿಕೊಳ್ಳಬಹುದು, ನೀವು ನೋಡಬಹುದು ನಾವು ನಮ್ಮ ಡ್ರೆಸ್ಸಿಗೆ ನೇರಳೇ ಬಣ್ಣದ ಪುಕ್ಕವನ್ನು ಸೇರಿಸಿದ್ದೇವೆ ಮತ್ತು ನಾವು ಇದನ್ನು ತೊಂಬಾ ಪ್ರೀತಿಸುತ್ತೇವೆ.ಈ ವೀಡಿಯೋ ನಿಮಗೆ ಹೇಗೆ ಇಷ್ಟವಾಯಿತು ಎಂದು ನಮಗೆ ಕಮೆಂಟ್ ಮಾಡಿ ಮತ್ತು ನೀವು ಬೇರೆ ಏನನ್ನು ಕಲೆಯಲು ಇಷ್ಟಪಡುತ್ತೀರೆಂದು ನಮಗೆ ಕಮೆಂಟ್ ನಲ್ಲಿ ತಿಳಿಸಿ. ಲೈಕ್ ಮಾಡಿ ಸಬ್ ಸ್ಕ್ರೈಬ್ ಮಾಡಲು ಮರೆಯಬೇಡಿ. ಮತ್ತು ವಾಸ್ ಡ್ರೆಸ್ ಹೊಲೆಯಲು ಇಷ್ಟಪಡುವ ನಿಮ್ಮ ಸ್ನೇಹಿತರೊಂದಿಗೆ ಇದನ್ನು ಶೇರ್ ಮಾಡಿ.